

# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 229 | Pages. 2 | Date: 23-07-2025, WEDNESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 229 - ಪುಟಗಳು : 2 - 23 ಜುಲೈ 2025 ಬುಧವಾರ Ph: 8762954248 ದರ : ₹1


# ಸಿಎಂ ಕಾರ್ಯಕ್ರಮ: ಲೋಪವಾಗದಂತೆ ಕ್ರಮ ವಹಿಸಿ

## ಜು. 26ಕ್ಕೆ ಅರಸೀಕೆರೆಗೆ ಸಿದ್ದರಾಮಯ್ಯ | ಜಿಲ್ಲಾಧಿಕಾರಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಸರ್ಕಾರಿ ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜು ಉದ್ಘಾಟನೆ ಹಾಗೂ ವಿವಿಧ ಕಾಮಗಾರಿ ಶಂಕುಸ್ಥಾಪನೆ ಸಮಾರಂಭಕ್ಕೆ ಜು. 26 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸಲಿದ್ದು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಸೂಚಿಸಿದರು.



ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿ, ಸುರಕ್ಷತೆಗೆ ಆದ್ಯತೆ ನೀಡಬೇಕು. ಕಾರ್ಯಕ್ರಮ ಮುಗಿಯುವರೆಗೆ ಯಾರು ಆ ಕಡೆ ಈ ಕಡೆ ಓಡಾಡದಂತೆ ಶಿಸ್ತುಬದ್ಧವಾಗಿ ಕುಳಿತುಕೊಳ್ಳಲು ನಿಗಾವಹಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸುಸಜ್ಜಿತವಾದ ಎರಡು ಅಂಬುಲೆನ್ಸ್‌ಗಳೊಂದಿಗೆ ಪ್ರಥಮ ಚಿಕಿತ್ಸೆಗೆ ಅಗತ್ಯ ಔಷಧಿಗಳು ತುರ್ತು ಸಂದರ್ಭದಲ್ಲಿ ಲಭ್ಯವಿರಬೇಕು. ಈ ಈ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಎಚ್ಚರ ವಹಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಕಾರ್ಯಕ್ರಮದಲ್ಲಿ ಉದ್ಘಾಟನೆ ಮತ್ತು ಶಿಲಾನ್ಯಾಸ ನೆರವೇರುವ ಕಾಮಗಾರಿಗಳ ಕಲ್ಲುಗಳನ್ನು ಶಿಷ್ಟಾಚಾರದಂತೆ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಎಚ್ಚರ ವಹಿಸಬೇಕು. ಶುಚಿತ್ವ ಕಾಪಾಡಲು ನಗರಸಭೆಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದರು.

ಇದು ಸರ್ಕಾರಿ ಕಾರ್ಯಕ್ರಮ ವಾಗಿರುವುದರಿಂದ ಕಡ್ಡಾಯವಾಗಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಇಲಾಖಾ ಮಾಹಿತಿಯೊಂದಿಗೆ ಭಾಗವಹಿಸಬೇಕು ಎಂದು ನಿರ್ದೇಶನ ನೀಡಿದರು.

ರಾಜ್ಯ ಗೃಹ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಸರ್ಕಾರಿ ಎಂಜಿನಿಯರಿಂಗ್ ಕಾಲೇಜು (68 ಕೋಟಿ ರೂ), ವಸತಿ ರಹಿತರಿಗೆ ವಸತಿ ಯೋಜನೆಯಡಿ ನಿರ್ಮಾಣವಾಗಿರುವ ಮನೆಗಳ ಸ್ವಾಧೀನ ಪತ್ರ ಹಸ್ತಾಂತರ (53 ಕೋಟಿ ರೂ. ವೆಚ್ಚದ), ಅರಸೀಕೆರೆ ಬಂಡಿಹಳ್ಳಿ ಬೈಪಾಸ್‌ನಿಂದ ಜಾಜೂರು ಬೈಪಾಸ್ ವರೆಗೆ ರಸ್ತೆ ನಿರ್ಮಾಣ (8.7 ಕೋಟಿ ರೂ.), ಸರ್ಕಾರಿ ಪಾಲಿಟೆಕ್ನಿಕ್ (8 ಕೋಟಿ ರೂ.), ವಾರ್ಡ್ ನಂ.1 ಕಂತೇನಹಳ್ಳಿ ಅರಸೀ ಉದ್ಯಾನವನದಲ್ಲಿ ನೂತನವಾಗಿ ನಿರ್ಮಿಸಿರುವ ಈಜುಕೊಳ (5 ಕೋಟಿ ರೂ.), ವಾರ್ಡ್ ನಂ.22ರ ಸಂತೆ ಮೈದಾನದಲ್ಲಿ ಐಡಿಎಸ್‌ಎಂಟಿ ಯೋಜನೆಯಲ್ಲಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣ ಮಳಿಗೆಗಳು (3 ಕೋಟಿ ರೂ.), 6 ಅಂಗನವಾಡಿ ಕಟ್ಟಡಗಳು (1.2 ಕೋಟಿ ರೂ.) ಮತ್ತಿತರ ಪೂರ್ಣಗೊಂಡಿರುವ ಕಾಮಗಾರಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಭಾಗಿಯಾಗಲಿದ್ದಾರೆ ಎಂದರು.

ಕಸಬಾ, ಕಣಕಟ್ಟೆ, ಬಾಣಾವರ ಮತ್ತು ಗಂಡಸಿ ಹೋಬಳಿಗಳು ಸೇರಿ 48 ರಸ್ತೆ ಕಾಮಗಾರಿ 57.45 ಕೋಟಿ ರೂ., ಅರಸೀಕೆರೆ ಕಟ್ಟಡ ಕಾರ್ಮಿಕರ ಮಕ್ಕಳ ವಸತಿ ಶಾಲೆ 36 ಕೋಟಿ ರೂ., ಕುಸುಮ್ .ಸಿ ಯೋಜನೆಯಡಿ ಐ.ಪಿ. ಫೀಡರ್ ಸೋಲಾರೈಸೇಷನ್ 08 ಕಾಮಗಾರಿಗಳು 19.29 ಕೋಟಿ ರೂ., ಎತ್ತಿನಹೊಳೆ ನಾಲೆಯಿಂದ ಕುಡಿಯುವ ನೀರಿಗಾಗಿ ಕೆರೆ ತುಂಬಿಸುವ ಯೋಜನೆ 14.80 ಕೋಟಿ ರೂ., ಚೆಕ್ ಡ್ಯಾಂ ಕಂ ಬ್ರಿಡ್ಜ್ ನಿರ್ಮಾಣ ಮತ್ತು ಕೆರೆಗಳ ಆಧುನೀಕರಣ ಕಾಮಗಾರಿಗಳು 14.30 ಕೋಟಿ ರೂ., ಒಳಾಂಗಣ ಕ್ರೀಡಾಂಗಣ ನಿರ್ಮಾಣ ವಿವಿಧ ಕಾಮಗಾರಿ ಉದ್ಘಾಟನೆಯಾಗಲಿದೆ ಎಂದು ಮಾಹಿತಿ ನೀಡಿದರು.

ನಗರಸಭೆ ಅಧ್ಯಕ್ಷ ಎಂ. ಸಮಿವುಲ್ಲಾ, ಉಪಾಧ್ಯಕ್ಷ ಮನೋಹರ್ ಮೇಸ್ತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು ಉಪಸ್ಥಿತರಿದ್ದರು.

# ಆರೋಗ್ಯಕ್ಕಾಗಿ ಸಮಯ ಮೀಸಲಿಡಿ: ಬಿ.ಆರ್. ಪೂರ್ಣಿಮಾ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪ್ರತಿಯೊಬ್ಬರು ಆರೋಗ್ಯಕ್ಕಾಗಿ ಪ್ರತಿದಿನ 45 ನಿಮಿಷ ನಡಿಗೆ, 20 ನಿಮಿಷ ಯೋಗಾಭ್ಯಾಸ ಅಥವಾ ವ್ಯಾಯಾಮ ಮಾಡಬೇಕು. ಜನರು ಜೀವನ ಶೈಲಿ ಹಾಗೂ ಆಹಾರ ಸೇವನೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಸಲಹೆ ನೀಡಿದರು.

ಹೃದಯ ಸಂಬಂಧಿ ಕಾಯಿಲೆಗಳಿಂದ ಸಾವು ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟನಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಗರದ ಹೇಮಾವತಿ ಪ್ರತಿಮೆ ಬಳಿ ಮೊಬೈಲ್ ಲೈಟ್‌ಕ್ಯಾಂಪೇನ್‌ಗೆ ಚಾಲನೆ ನೀಡಿ ಮಾತನಾಡಿ, ಒಂದು ದಿನದ ಅರಿವು ಕಾರ್ಯಕ್ರಮ ಆಗಬಾರದು. ಪ್ರತಿದಿನ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ನಡೆಯಬೇಕುಎಂದರು.




ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಂತೆ ಜಿಲ್ಲೆಯ ಒಂದರಿಂದ ಹತ್ತನೇ ತರಗತಿಯ 1.90 ಲಕ್ಷ ಮಕ್ಕಳಲ್ಲಿ 1 ಲಕ್ಷ ಮಕ್ಕಳಿಗೆ ಈಗಾಗಲೇ ತಪಾಸಣೆ ಮಾಡಲಾಗಿದೆ ಎಂದರು.

ಆಧುನಿಕ ಜೀವನ ಶೈಲಿಯಿಂದ ಹೃದಯ ಆರೋಗ್ಯದ ಕಡೆಗೆ ಗಮನ ಹರಿಸಬೇಕಿದೆ.

ರಾಜ್ಯ ಸರ್ಕಾರ ಗೃಹ ಆರೋಗ್ಯಕಾರ್ಯಕ್ರಮದಡಿ ಮನೆ ಮನೆಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ಮಾಡಲಾಗುತ್ತಿದ್ದು, ಅವಶ್ಯಕವಿರುವ ಚಿಕಿತ್ಸೆ, ಮಾತ್ರೆಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್. ಮಲ್ಲೇಶಗೌಡ ಮಾತನಾಡಿ, ಯುವ ಜನತೆಯಲ್ಲಿ ಹೃದಯಾಘಾತದಿಂದ ಮರಣ ಹೊಂದುತ್ತಿರುವುದು ಕಂಡುಬರುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಯುವ ಪೀಳಿಗೆ ಮನೆಯಲ್ಲಿ ತಯಾರಿಸುವ ಆಹಾರ ಸೇವನೆ ಮಾಡುವುದಕ್ಕೆ ಆದ್ಯತೆ ನೀಡಿ ಜೊತೆಗೆ ಮೊಬೈಲ್ ಅನ್ನು ಮಿತವಾಗಿ ಬಳಕೆ ಮಾಡುವುದನ್ನು ರೂಢಿಸಿಕೊಳ್ಳಿ. ವಯಸ್ಸಾದ ನಾಗರಿಕರು ಕೂಡ ತಾವು ಸೇವಿಸುವ ಆಹಾರದ ಬಗ್ಗೆ ಗಮನಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಹಿಮ್ಸ್ ನಿರ್ದೇಶಕ ಡಾ. ಬಿ. ರಾಜಣ್ಣ ಇತರರಿದ್ದರು.

# ಗ್ಯಾರಂಟಿ ತಲುಪದಿದ್ದರೆ ಸಮಿತಿಗೆ ತಿಳಿಸಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಸರ್ಕಾರದ ಗ್ಯಾರಂಟಿ ಯೋಜನೆಗಳು ತಲುಪದೆ ಇರುವ ಜನರು ತಾಲ್ಲೂಕು ಅನುಷ್ಠಾನ ಸಮಿತಿಗೆ ಮಾಹಿತಿ ನೀಡಿದರೆ ಅಧಿಕಾರಿಗಳ ಮೂಲಕ ಸಮಸ್ಯೆ ಬಗೆಹರಿಸಲಾಗುವುದು ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಎಲ್.ಪಿ. ಪ್ರಕಾಶಗೌಡ ಹೇಳಿದರು.

ತಾಲ್ಲೂಕಿನ ಹಿರೀಸಾವೆಯಲ್ಲಿ ಹೋಬಳಿ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ಯಾರಂಟಿಗಳನ್ನು ಜನರಿಗೆ ತಲುಪಿಸುವಲ್ಲಿ ಚನ್ನರಾಯಪಟ್ಟಣ ತಾಲ್ಲೂಕು ಜಿಲ್ಲೆಯಲ್ಲಿ 2ನೇ ಸ್ಥಾನದಲ್ಲಿ ಇದೆ ಎಂದರು.

ಗೃಹಲಕ್ಷ್ಮೀ ಯೋಜನೆಗೆ ಸಂಬಂಧಿಸಿದ 300 ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಯುವನಿಧಿ ಯೋಜನೆಯಡಿ 1,381 ಫಲಾನುಭವಿಗಳು ಇದ್ದಾರೆ. ಎಲ್ಲಾ ಇಲಾಖೆಯವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ.

ಅರ್ಹ ಫಲಾನಿಭವಿಗಳಿಗೆ ಗ್ಯಾರಂಟಿಗಳು ತಲುಪದಿದ್ದರೆ ಜನಪ್ರತಿನಿಧಿಗಳು, ಅಧಿಕಾರಿಗಳು ಅವರನ್ನು ಗುರುತಿಸಿ ಸೌಲಭ್ಯ ಕಲ್ಪಿಸಬೇಕು ಎಂದು ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್ ಮಾತನಾಡಿ, ಐದು ಯೋಜನೆಗಳ ಇಲಾಖೆಯವರು ಶ್ರಮದಿಂದ ತಾಲ್ಲೂಕಿನಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದೇವೆ. ಅಂಗನವಾಡಿ ಕಾರ್ಯಕರ್ತೆಯರು ಪ್ರತಿ ಮನೆಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಪಡೆಯುತ್ತಿರವ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಬೇಕು ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಗಣೇಶ್, ಮಿಲಿಟರಿ ಮಂಜುನಾಥ್, ಜನಾರ್ಧನ್, ಮಧು, ರಂಗಸ್ವಾಮಿ, ನವೀನ್, ಕೆಂಪೇಗೌಡ, ನಾಗೇಶ್, ಕೆಡಿಪಿ ನಾಮ ನಿರ್ದೇಶ ಸದಸ್ಯ ಬ್ಯಾಡರಹಳ್ಳಿ ಯೋಗೇಶ್ ಜನರ ಸಮಸ್ಯೆಗಳ ಪರವಾಗಿ ಮಾತನಾಡಿದರು.

ಗೃಹ ಲಕ್ಷ್ಮಿ ಯೋಜನೆ ಇದುವರೆಗೆ ತಲುಪದೆ ಇರುವ ಕೆಲವು ಮಹಿಳೆಯರು ಸಭೆಗೆ ಮಾಹಿತಿ ನೀಡಿದರು. ಸೆಸ್ಕಾಂ ಎಇಇ ವಜ್ರಕುಮಾರ್, ಸಿಡಿಪಿಒ ಇಂದಿರಾ, ಕೆಎಸ್ಆರ್‌ಟಿಸಿಯ ಅಧಿಕಾರಿ ಕೃಪಾಕರ್, ಆಹಾರ ಶಿರೆಸ್ತಾರ್ ಹೇಮಂತ್, ಉದ್ಯೋಗ ವಿನಿಮಯ ಕಛೇರಿಯ ಗುರುಸ್ವಾಮಿ ತಮ್ಮ ಇಲಾಖೆಯ ಯೋಜನೆ ಪ್ರಗತಿ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಯುವ ನಿಧಿಯ ಯೋಜನೆ ಪ್ಲಸ್ ಪಡೆಯುವ ಬಗ್ಗೆ ಕರಪತ್ರಗಳನ್ನು ಅತಿಥಿಗಳು ಬಿಡುಗಡೆ ಮಾಡಿದರು. ಹೋಬಳಿಯ ಎಲ್ಲಾ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಪ್ರಾಂಶುಪಾಲ ಲಕ್ಷ್ಮೇಗೌಡ ಇದ್ದರು.

# ಅಕ್ಷರ ಜ್ಞಾನ ಧಾರೆ ಎರೆದ ಶಾಲೆಗೆ ನೆರವಾದ ಹಳೆಯ ವಿದ್ಯಾರ್ಥಿಗಳು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಸದೃಢ ಬದುಕು ಕಟ್ಟಿಕೊಟ್ಟ ಶಾಲೆಗೆ ಹಳೆಯ ವಿದ್ಯಾರ್ಥಿಗಳೆಲ್ಲರೂ ಒಟ್ಟಾಗಿ ಸುಮಾರು 3 ಲಕ್ಷ ರೂ. ಮೌಲ್ಯದ ವಿವಿಧ ಪರಿಕರಗಳ ನೀಡುವ ಮೂಲಕ ಔದಾರ್ಯ ಮೆರೆದಿದ್ದಾರೆ.

ಪಟ್ಟಣದ ನವೋದಯ ವಿದ್ಯಾಶಾಲೆಗೆ 1975ನೇ ಸಾಲಿನ ವಿದ್ಯಾರ್ಥಿಗಳು ಅಮೂಲ್ಯ ವಸ್ತುಗಳನ್ನು ಕೊಟ್ಟಿದ್ದು ಅದರಿಂದ ಪ್ರಸ್ತುತ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಸ್ವಾತಂತ್ರ್ಯ ಪೂರ್ವದ ಇತಿಹಾಸ ಹೊಂದಿರುವ ಶಾಲೆಯಲ್ಲಿ ಲಕ್ಷಾಂತರ ಜನರು ವ್ಯಾಸಂಗ ಮಾಡಿದ್ದಾರೆ.

50 ವರ್ಷಗಳ ಹಿಂದೆ ವ್ಯಾಸಂಗ ಮಾಡಿದ 160 ಜನರು ಈಗ ವಿವಿಧ ವೃತ್ತಿಯಲ್ಲಿ ನಿರತರಾಗಿದ್ದಾರೆ. ಕಳೆದ ಒಂದು ವರ್ಷದಿಂದ ಸಮ್ಮಿಲಿನ ಕಾರ್ಯಕ್ರಮ ನಡೆಸುವ ಕುರಿತು ಯೋಜನೆ ರೂಪಿಸಲಾಗಿತ್ತು. ಶಿಕ್ಷಣ



ನೀಡಿದ, ಬದುಕಿಗೆ ಆಸರೆಯಾದ ನವೋದಯ ವಿದ್ಯಾ ಶಾಲೆ, ಗುರುವರ್ಯರ ಸ್ಮರಣೆ ಮಾಡುವ ಅವಿಸ್ಮರಣೀಯ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು.

ನಿವೃತ್ತ ಶಿಕ್ಷಕರಾದ ಎಲ್.ಎಸ್. ರಾಮನ್, ಸಿ.ಎನ್. ವಸಂತ್ ಅವರನ್ನು ಇದೆ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಎಸ್.ಎಸ್. ರಾಮನ್ ಮಾತನಾಡಿ, ಬದುಕಿಗೆ ಆಸರೆಯಾದ ನವೋದಯ ಶಾಲೆಯನ್ನು ಎಂದೂ ಮರೆಯಲಾಗದು. ಅದೇ ರೀತಿ ವಿದ್ಯಾರ್ಥಿಗಳ ಶಿಕ್ಷಣ ಪ್ರೇಮ ಹಾಗು ಶಿಕ್ಷಕರ ಬಗ್ಗೆ ಇದ್ದ ಪ್ರೇಮ ಬಣ್ಣಿಸಲಾಗದು.

ಗುಣಮಟ್ಟದ ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಲ್ಲಿ ಕಲಿಕಾ ಆಸಕ್ತಿಯು ಮುಖ್ಯವಾಗುತ್ತದೆ. ಶಿಕ್ಷಕರು, ಆಡಳಿತ ಮಂಡಳಿ ಹಾಗೂ ಪೋಷಕರ, ಸಕಾರಾತ್ಮಕ ಚಿಂತನೆಯಿಂದ ಶಿಕ್ಷಣ ನೀಡಿದಾಗ ಸಂಸ್ಥೆ ಬಾನೆತ್ತರಕ್ಕೆ ಬೆಳೆಯುತ್ತದೆ ಎಂದರು.

ಸಿ.ಎನ್. ವಸಂತ್ ಮಾತನಾಡಿ, ಶಿಕ್ಷಕ ವೃತ್ತಿ ಪವಿತ್ರವಾದುದ್ದು. ಶಿಕ್ಷಕ ವಿದ್ಯಾದಾನ ಮಾಡುವ ಮೂಲಕ ತನ್ನ ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾನೆ. ಸೇವೆಗಾಗಿ ಬಾಳು ಎಂಬ ಧ್ಯೇಯದಡಿ ನವೋದಯ ವಿದ್ಯಾ ಶಾಲೆ ಕಾರ್ಯ ಮಾಡಿತ್ತು ಎಂದರು.

ನಿವೃತ್ತ ಪ್ರಾಂಶುಪಾಲ ಸಿ.ಬಿ. ಮಂಜೇಗೌಡ ಮಾತನಾಡಿ, ಇಲ್ಲಿ ಅಕ್ಷರ ಕಲಿತ ಅನೇಕ ವಿದ್ಯಾರ್ಥಿಗಳು ಉನ್ನತ ಮಟ್ಟ ತಲುಪಿದ್ದಾರೆ. ಹೊರ ದೇಶಗಳಲ್ಲೂ ಕೆಲಸ ಗಿಟ್ಟಿಸಿಕೊಂಡಿದ್ದಾರೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಈ ಶಾಲೆಯ ವಿದ್ಯಾರ್ಥಿಗಳು ತಮ್ಮದೇಯಾದ ಘನತೆ, ವ್ಯಕ್ತಿತ್ವ ಹೊಂದಿದ್ದಾರೆ. ಸಮಾಜಕ್ಕೆ ಮಾರ್ಗದರ್ಶಕರಾಗಿದ್ದಾರೆ.

ಇದು ನಮ್ಮ ತಾಲ್ಲೂಕಿನ ಹೆಮ್ಮೆ ಎಂದರು. ಸಂಸ್ಥೆಯ ಅಧ್ಯಕ್ಷ ಸಿ.ಜೆ. ಮಂಜುನಾಥ್ ಅವರು ಮಾತನಾಡಿ, ನವೋದಯ ವಿದ್ಯಾ ಸಂಸ್ಥೆ ಸಂಸ್ಥಾಪಕರ ಆಶಯ, ಧ್ಯೇಯ ಪರಿಪಾಲನೆ ಜವಾಬ್ದಾರಿ ನಮ್ಮದಾಗಿದೆ, ಹಳೆಯ ವಿದ್ಯಾರ್ಥಿಗಳ ಮಾರ್ಗದರ್ಶನ, ಅವರ ಕೊಡುಗೆ ಮೂಲಕ ಗುಣಾತ್ಮಕ ಶಿಕ್ಷಣವನ್ನ ನವೋದಯ ವಿದ್ಯಾಶಾಲೆ ನೀಡುತ್ತದೆ ಎಂದರು.

ಹಳೆಯ ವಿದ್ಯಾರ್ಥಿ ಹಾಗೂ ಹೈಕೋರ್ಟ್ ವಕೀಲ ಶಶಿಧರ್, ಉದ್ಯಮಿ ಸಿ.ವಿ. ತಕ್ಷಕುಮಾರ್, ಪ್ರೌಢಶಾಲಾ ನಿವೃತ್ತ ಮುಖ್ಯ ಶಿಕ್ಷಕಿ ನಾಗರತ್ನ, ನಿವೃತ್ತ ಕೃಷಿ ಇಲಾಖೆ ಅಧಿಕಾರಿ ಮಲ್ಲೇಶ್‌ಗೌಡ ತಮ್ಮ ಅನುಭವ ಹಂಚಿಕೊಂಡರು.

ನವೋದಯ ಕಿರಿಯ ಕಾಲೇಜಿನ ಪ್ರಾಂಶುಪಾಲ ಎ.ಟಿ. ಸಂಜಯ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾದ ಶಶಿಧರ್, ನಾಗರತ್ನ, ಮಂಜೇಗೌಡ ವಿದ್ಯಾರ್ಥಿಗಳಿಗೆ ಅಮೂಲ್ಯ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದರು.

ಹಳೆಯ ವಿದ್ಯಾರ್ಥಿಗಳಾದ ಸಿ.ಟಿ. ರಾಮರಾವ್, ಗಿರೀಶ್, ಸಿ.ಟಿ. ರವಿ, ಸ್ವರ್ಣ ದಯಾನಂದ್ ಮತ್ತಿತರರಿದ್ದರು.

# ಸರ್ಕಾರಿ ಶಾಲೆ ಬಗ್ಗೆ ತಾತ್ಸಾರ ಬೇಡ: ಈರಪ್ಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಸರ್ಕಾರಿ ಶಾಲೆಯಲ್ಲಿ ಓದಿದ ನನ್ನಂತ ಅನೇಕರು ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದು ತಾರತಮ್ಯ ಮಾಡದೆ ಮಕ್ಕಳು ಓದಿನ ಕಡೆಗೆ ಗಮನ ಕೊಡಬೇಕು ಎಂದು ಅಬಕಾರಿ ಇಲಾಖೆ ನಿವೃತ್ತ ಅಧಿಕಾರಿ ಹೆಚ್.ಪಿ. ಈರಪ್ಪ ಹೇಳಿದರು.

ತಾಲ್ಲೂಕಿನ ಹನ್ಯಾಳು ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಮಕ್ಕಳ ಮನೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕೇರಳಾಪುರದ ಶ್ರೀ ಪ್ರಸನ್ನ ವೀರಭದ್ರೇಶ್ವರ ಸ್ವಾಮಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಬ್ಯಾಗ್ ವಿತರಣೆ ಸಮಾರಂಭದಲ್ಲಿ ಮಾತನಾಡಿ, ನಮ್ಮ ತಂದೆ ದಿ. ಪುಟ್ಟಸ್ವಾಮಪ್ಪ ಹಾಗೂ ತಾಯಿ ಗೌರಮ್ಮ ಅವರ ಹೆಸರಿನಲ್ಲಿ 19 ವರ್ಷಗಳ ಹಿಂದೆ ನೀಡಿದ ಭೂಮಿಯಲ್ಲಿ ನಿರ್ಮಾಣವಾಗಿರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಮಾತನಾಡಲು ಅವಕಾಶ ಸಿಕ್ಕಿದ್ದು ಪುಣ್ಯ. ವಿದ್ಯಾರ್ಥಿ ಜೀವನ ತುಂಬಾ ಅಮೂಲ್ಯವಾದುದ್ದು. ನಿತ್ಯ ವೃತ್ತ ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಂಡು ಗುರುಗಳು ಹೇಳಿಕೊಟ್ಟ ಪಾಠ ಪ್ರವಚನಗಳನ್ನು ಅರ್ಥೈಸಿಕೊಂಡು ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿ ಉದ್ಯೋಗ ಪಡೆಯಬೇಕು. ಆ ಮೂಲಕ



ಬದುಕು ಹಸನಾಗಿಸಿಕೊಳ್ಳಬೇಕು ಎಂದರು.

ಲೆಕ್ಕ ಪರಿಶೋಧನಾ ಇಲಾಖೆ ಹಿರಿಯ ಉಪನಿರ್ದೇಶಕ ಹೆಚ್.ಈ. ಅಶೋಕ್ ಮಾತನಾಡಿ, ಹನ್ಯಾಳು ರಾಜಕೀಯ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದ ಗ್ರಾಮ. ಇದೇ ಗ್ರಾಮದವರಾದ ಈರಪ್ಪ ಅವರು ಬಡತನ ಬೇಗೆಯಲ್ಲಿ ಬೆಂದು ಕಠಿಣ ಪರಿಶ್ರಮದಿಂದ ಉನ್ನತ ಸ್ಥಾನ ಗಳಿಸಿದವರು. ಸರ್ಕಾರಿ ಶಾಲೆಯಲ್ಲಿ ಓದಿ ಮಹತ್ತರ ಸಾಧನೆ ಮಾಡಿರುವ ಅವರನ್ನು ವಿದ್ಯಾರ್ಥಿಗಳು ಆದರ್ಶವಾಗಿರಿಸಿಕೊಳ್ಳಬೇಕು ಎಂದರು.

ಮುಖ್ಯಶಿಕ್ಷಕ ಕೆ.ಎನ್. ರವಿಕುಮಾರ್ ಮಾತನಾಡಿ, ಹುಟ್ಟಿದ ಊರಿಗೆ, ಓದಿದ ಶಾಲೆಗೆ ನಿರಂತರವಾಗಿ ಕೊಡುಗೆ ನೀಡುತ್ತಾ ಬಂದಿರುವ ಈರಪ್ಪ ಅವರ ಸಮಾಜ ಸೇವೆ ಮೆಚ್ಚುವಂತಹುದು. ಸುಮಾರು 1.05 ಲಕ್ಷ ರೂ. ಮೊತ್ತದ ಬ್ಯಾಗ್ ಗಳನ್ನು ಹನ್ಯಾಳು ಮತ್ತು ಕೇರಳಾಪುರ ಶಾಲೆಯ ವಿದ್ಯಾರ್ಥಿಗಳಿಗೆ ವಿತರಿಸುವ ಮೂಲಕ ಬಡಮಕ್ಕಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರು.

ವಿದ್ಯಾರ್ಥಿಗಳಾದ ಚೈತನ್ಯ, ಹೇಮಲತಾ ಮಾತನಾಡಿದರು. ಈರಪ್ಪ ದಂಪತಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಕನ್ಯಾ ರಾಮಚಂದ್ರ ವಹಿಸಿದ್ದರು. ಟ್ರಸ್ಟಿಗಳಾದ ಪರಮೇಶ್ವರಪ್ಪ, ಸಂಗಮೇಶ್, ಸುಕನ್ಯಾ ಈರಪ್ಪ, ಮಹಾದೇವ್, ಶಾಂತವೀರಯ್ಯ, ನಿವೃತ್ತ ಶಿಕ್ಷಕ ಲಕ್ಕೇಗೌಡ, ಹಳೆಯ ವಿದ್ಯಾರ್ಥಿ ವೇದಿಕೆಯ ಸದಸ್ಯರಾದ ಪವನ್, ಗಿರೀಶ್, ಹನುಮೇಶ್ ಮತ್ತಿತರರಿದ್ದರು.

# ಐದು ಅಂಬುಲೆನ್ಸ್‌ಗೆ ಸರ್ಕಾರಕ್ಕೆ ಮನವಿ: ಸಿಮೆಂಟ್ ಮಂಜು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗುವಂತೆ ಐದು ಅಂಬುಲೆನ್ಸ್ ಕಲ್ಪಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಕ್ರಾಫರ್ಡ್ ಆಸ್ಪತ್ರೆ ಸಭಾಂಗಣದಲ್ಲಿ ಮಂಗಳವಾರ ನಡೆದ ತಾಲ್ಲೂಕಿನ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರ ಸಭೆಯಲ್ಲಿ ಮಾತನಾಡಿ, ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಲ್ಲಿ ಮೂಲಸೌಕರ್ಯಗಳ ಕೊರತೆಯಿದೆ. ತುರ್ತು ಚಿಕಿತ್ಸೆ ನೀಡಲು ಇಸಿಜಿ ಸೇರಿ ಇತರ ಉಪಕರಣಗಳಿಲ್ಲ. ರಕ್ತ



ಪರೀಕ್ಷೆಗಾಗಿ ಪಟ್ಟಣದ ಆಸ್ಪತ್ರೆಗಳನ್ನೇ ಅವಲಂಬಿಸಬೇಕಾಗಿದೆ. ವೈದ್ಯರು ಹಾಗೂ ಆಸ್ಪತ್ರೆ ಸಮಸ್ಯೆ ಅರಿಯಲು ಸಭೆ ಕರೆದಿದ್ದು ಮೂಲಸೌಕರ್ಯಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ತಾಲ್ಲೂಕಿನ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಹಾಗೂ ನರ್ಸ್‌ಗಳ ಕೊರತೆ ಇದೆ. ಸಕಲೇಶಪುರ ಮಲೆನಾಡು ಭಾಗವಾಗಿರುವುದರಿಂದ ಗ್ರಾಮೀಣ ಪ್ರದೇಶ ಹೆಚ್ಚಿದೆ. ತುರ್ತಾಗಿ ಆಸ್ಪತ್ರೆ ತಲುಪಲು ಅಂಬುಲೆನ್ಸ್ ವ್ಯವಸ್ಥೆ ಇಲ್ಲ. ದಿನದ 24 ಗಂಟೆ ಸೇವೆ ಒದಗಿಸುವ 5 ಹೋಬಳಿ ಕೇಂದ್ರಗಳಿಗೆ ತುರ್ತು ಚಿಕಿತ್ಸಾ ವಾಹನ ನೀಡುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಮನವಿ ಮಾಡಲಾಗಿದೆ ಎಂದರು.

ತಾಲ್ಲೂಕಿನ ಬಾಳ್ಳುಪೇಟೆ, ಯಸಳೂರು, ಅತ್ತಿಹಳ್ಳಿ ಮತ್ತು ಕ್ಯಾಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರಿಲ್ಲ. ಈ ಬಗ್ಗೆಯೂ ಸಚಿವರ ಗಮನ ಸೆಳೆಯಲಾಗಿದೆ ಎಂದು ತಿಳಿಸಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಮಹೇಶ್, ಕ್ರಾಫರ್ಡ್ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಹರೀಶ್, ಡಾ. ಮಧುಸೂದನ್ ಹಾಗೂ ಇತರರಿದ್ದರು.

# ಅವಧಿ ಮೀರಿದ ಮದ್ಯ ನಾಶ

ಹಾಸನ : ಹಾಸನ ಪ್ಲಾಟ್ ನಂ:1-ಬಿ/ಪಿ1 ಪಿ2, ಕೆಐಎಡಿಬಿ ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್, ದೊಡ್ಡಬಸವನಹಳ್ಳಿ ಅಂಚೆ, ಹಾಸನದಲ್ಲಿರುವ ಕೆಎಸ್ ಬಿಸಿಎಲ್ ಮದ್ಯ ಮಳಿಗೆ-1 ರಲ್ಲಿ ಮಾರಾಟವಾಗದೇ ಉಳಿದಿರುವ/ಅವಧಿ ಮೀರಿದ 285 ರಟ್ಟಿನ ಪೆಟ್ಟಿಗೆಗಳು ಮತ್ತು 48 ಬಾಟಲಿಗಳಲ್ಲಿರುವ 2386.560 ಲೀಟರ್ಸ್ ಬಿಯರ್ ಮತ್ತು 13 ರಟ್ಟಿನ ಪೆಟ್ಟಿಗೆಗಳಲ್ಲಿರುವ 85.800 ಲೀಟರ್ ಲ್ಯಾಬ್ ದಾಸ್ತಾನುಗಳನ್ನು (ಒಟ್ಟು 298 ರಟ್ಟಿನ ಪೆಟ್ಟಿಗೆಗಳು ಮತ್ತು 48 ಬಾಟಲಿಗಳಲ್ಲಿರುವ 2472.360 ಲೀಟರ್ಸ್ ದಾಸ್ತಾನು) ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಇವರ ನಡವಳಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರಾದ ರಘು.ಎಮ್.ಹೆಚ್, ಇವರ ನೇರ ಉಸ್ತುವಾರಿಯಲ್ಲಿ ಹಾಗೂ ಅಬಕಾರಿ ನಿರೀಕ್ಷಕರಾದ ರೂಪ ವಿ.ಕೆ, ವ್ಯವಸ್ಥಾಪಕರಾದ ರಾಜು ಎಸ್ ಹಾಗೂ ಪಂಚರುಗಳ ಸಮಕ್ಷಮ ನಾಶಪಡಿಸಲಾಗಿದೆ ಎಂದು ಹಾಸನ ಉಪ ವಿಭಾಗದ ಅಬಕಾರಿ ಉಪ ಅಧೀಕ್ಷಕರು ತಿಳಿಸಿದ್ದಾರೆ.

# ಹಾರನಹಳ್ಳಿಯಲ್ಲಿ ಕೃಷಿ ಕಾರ್ಯಾನುಭವ ಶಿಬಿರ

ಹಾಸನ: ತಾಲ್ಲೂಕಿನ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಹಾರನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ಕೃಷಿ ಕಾರ್ಯಾನುಭವ ಶಿಬಿರದ 2ನೇ ದಿನ ಕಾರ್ಯಕ್ರಮದಲ್ಲಿ ಆರೋಗ್ಯವೇ ಭಾಗ್ಯ ಧ್ಯೇಯ ವಾಕ್ಯದಡಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ರೈತರು ಪ್ರಮುಖವಾಗಿ ಆರೋಗ್ಯದೆಡೆಗೆ ಗಮನ ನೀಡಬೇಕು. ದೇಶಕ್ಕೆ ಅನ್ನ ನೀಡುವ ರೈತರ



ಕ್ಷೇಮ ನಮ್ಮೆಲ್ಲರ ಭಾಗ್ಯವೆಂಬ ಸಂದೇಶ ಸಾರುವ ನಾಟಕ ಪ್ರದರ್ಶಿಸಲಾಯಿತು.

ಅನಾರೋಗ್ಯ ಸಮಸ್ಯೆ ಉಂಟಾದಾಗ ವೈದ್ಯರ ಸಲಹೆ ಪಡೆಯುವುದು, ಸ್ವಚ್ಛತೆ ಕಾಪಾಡಿಕೊಳ್ಳುವುದು ಎಷ್ಟು ಅವಶ್ಯ ಎಂಬುದರ ಅರಿವನ್ನು ವಿದ್ಯಾರ್ಥಿಗಳು ಮನೋಜ್ಞ ಅಭಿನಯದ ಮೂಲಕ ತೋರಿಸಿದರು. ಸಂಪನ್ಮೂಲ ವ್ಯಕ್ತಿಯಾಗಿ ಕೃಷಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ. ಎಸ್.ಎ. ವೇಣು, ಅಂಗನವಾಡಿ ಶಿಕ್ಷಕಿ ರಾಣಿ, ಆಶಾ ಕಾರ್ಯಕರ್ತೆ ಕಲಾವತಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಗ್ರಾಮಗಳ ಸ್ವಚ್ಛತೆಯಿಂದ ದೇಶದ ಪ್ರಗತಿ ಸಾಧ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್



ಚನ್ನರಾಯಪಟ್ಟಣ: ಗ್ರಾಮೀಣ ಪ್ರದೇಶವು ಸ್ವಚ್ಛತೆಯಿಂದ ಕೂಡಿದ್ದಲ್ಲಿ ಮಾತ್ರ ದೇಶ ಪ್ರಗತಿ ಕಾಣಲು ಸಾಧ್ಯ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಪುರ ಗ್ರಾಮದಲ್ಲಿ ದಿಡಗ ಗ್ರಾಮ ಪಂಚಾಯಿತಿ ವತಿಯಿಂದ ನಡೆಯುತ್ತಿರುವ ಕಸ ಸಂಗ್ರಹಣೆ ಕಾರ್ಯ ವೀಕ್ಷಿಸಿ ಮಾತನಾಡಿ, ಸ್ವಚ್ಛತೆಗೆ ಆದ್ಯತೆ ನೀಡುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವುದನ್ನು ಸುಲಭದಲ್ಲಿ ತಡೆಗಟ್ಟಬಹುದು ಎಂದರು.

ಕಸ ಸಂಗ್ರಹಣೆ ಕಾರ್ಯದಲ್ಲಿ ಮಹಿಳಾ ಕಾರ್ಮಿಕರೇ ಹೆಚ್ಚು ತೊಡಗಿಕೊಂಡಿರುವುದು ವಿಶೇಷವಾಗಿದೆ. ಕಾರ್ಮಿಕರ ಆರೋಗ್ಯದ ಕಡೆಗೂ ಹೆಚ್ಚಿನ ಆದ್ಯತೆ ನೀಡಲಿದ್ದು ವರ್ಷದಲ್ಲಿ 2-3 ಬಾರಿ ಆರೋಗ್ಯ ತಪಾಸಣೆಗೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಬಹುತೇಕ ಗ್ರಾಮ ಪಂಚಾಯಿತಿಗಳಲ್ಲಿ ಕಸ ವಿಲೇವಾರಿ ಅಥವಾ ಕಸ ಸಂಗ್ರಹ ಕಾರ್ಯ ನಡೆಯುತ್ತಿದ್ದು ಮುಂದಿನ ದಿನಗಳಲ್ಲಿ ತಾಲ್ಲೂಕಿನ ಎಲ್ಲ ಗ್ರಾಮ ಪಂಚಾಯಿತಿಗಳ ಮೂಲಕ ಆಯಾ ವ್ಯಾಪ್ತಿಯ ಗ್ರಾಮಗಳ ಕಸ ಸಂಗ್ರಹಣೆಗೆ ಆದ್ಯತೆ ನೀಡಲಾಗುವುದು ಎಂದರು.

ನುಗ್ಗೇಹಳ್ಳಿ, ಬಾಗೂರು, ಕಲ್ಲೇಸೋಮನಹಳ್ಳಿ ಹಾಗೂ ಹಿರೀಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಗಳ ನೀರೆತ್ತುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿದ್ದು ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಈ ಹಂಗಾಮಿನ ಅಂತ್ಯದೊಳಗೆ ಎಲ್ಲ ಕೆರೆಗಳು ಬಹುತೇಕ ಭರ್ತಿಯಾಗಲಿವೆ ಎಂದು ಮಾಹಿತಿ ನೀಡಿದರು.

ದಿಡಗ-ಕಬ್ಬಳಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು ಸರ್ಕಾರದ ಮಟ್ಟದಲ್ಲಿ ಪ್ರಸ್ತಾವನೆಯ ಹಂತದಲ್ಲಿದೆ. ಅನುಮೋದನೆ ದೊರೆಯುತ್ತಿದ್ದಂತೆಯೇ ಜರೂರಾಗಿ ಕಾಮಗಾರಿ ಪ್ರಾರಂಭಿಸಿ ಮುಂದಿನ 2-3 ವರ್ಷಗಳಲ್ಲಿ ಪೂರ್ಣಗೊಳಿಸಿ ವ್ಯಾಪ್ತಿಯ ಸುಮಾರು 22ಕ್ಕೂ ಹೆಚ್ಚು ಕೆರೆ-ಕಟ್ಟೆಗಳಿಗೆ ನೀರು ತುಂಬಿಸಲಾಗುವುದು ಎಂದು ಭರವಸೆ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ದಿನೇಶ್, ಉಪಾಧ್ಯಕ್ಷೆ ಸಾವಿತ್ರಮ್ಮ, ಸದಸ್ಯ ಪಿ.ಕೆ. ಶಿವಶಂಕರ್, ಮಾಜಿ ಸದಸ್ಯ ಚಂದ್ರಣ್ಣ, ದಿಡಗ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಶ್ರೀಕಂಠಪ್ಪ, ಪಿಡಿಒ ಕೆ.ಎಸ್.ಪ್ರಕಾಶ್ ಹಾಗೂ ಇನ್ನಿತರರು ಇದ್ದರು.

# ಇಂದು ಅರಕಲಗೂಡಿನಲ್ಲಿ ಹೃದಯಕ್ಕಾಗಿ ನಡಿಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್



ಅರಕಲಗೂಡು: ತಾಲ್ಲೂಕು ಆಡಳಿತ ಮತ್ತು ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಹೃದಯಕ್ಕಾಗಿ ನಡಿಗೆ ಜಾಥಾ ಕಾರ್ಯಕ್ರಮವನ್ನು ಜು. 23ರಂದು ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಎ. ಮಂಜು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಯಾರೂ ಕೂಡ ಆರೋಗ್ಯದಲ್ಲಿ ಕಂಡುಬರುತ್ತಿರುವ ಸಮಸ್ಯೆಗಳ ಕುರಿತು ನಿರ್ಲಕ್ಷ್ಯ ತಾಳಬಾರದು. ಜಿಲ್ಲೆ ಸೇರಿ ರಾಜ್ಯದಲ್ಲಿ ಕಂಡುಬರುತ್ತಿರುವ ಹೃದಯಾಘಾತ ಪ್ರಕರಣಗಳನ್ನು ಗಮನಿಸಿದರೆ ಯಾವ ವಯಸ್ಸಿನವರಿಗೂ ಹೃದಯಾಘಾತ ಸೀಮಿತವಲ್ಲ ಎಂಬುದು ಗೊತ್ತಾಗುತ್ತಿದೆ. ಈ ಸಲುವಾಗಿ ಮುನ್ನೆಚ್ಚರಿಕೆ ಹಾಗೂ ಹೃದಯಾಘಾತ ಉಂಟಾಗುವ ವೇಳೆ ಕೈಗೊಳ್ಳಬೇಕಾದ ಕ್ರಮಗಳು, ತಪಾಸಣೆಯನ್ನು ಅಂದಿನ ಕಾರ್ಯಕ್ರಮದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ಮಾತನಾಡಿ, ಬೆಳಿಗ್ಗೆ 7.30ಕ್ಕೆ ಹೃದಯಕ್ಕಾಗಿ ನಡಿಗೆ ಕಾರ್ಯಕ್ರಮ ಶಾಸಕ ಎ. ಮಂಜು ಅವರ ಅಧ್ಯಕ್ಷತೆಯಲ್ಲಿ ಆರಂಭಗೊಳ್ಳಲಿದೆ. ಜಾಥಾದಲ್ಲಿ ಭಾಗವಹಿಸುವ ಎಲ್ಲರೂ ಕೂಡ ಕಡ್ಡಾಯವಾಗಿ ಕೆಂಪು ಬಣ್ಣದ ಉಡುಗೆಗಳನ್ನು ತೊಟ್ಟು ಭಾಗವಹಿಸಬೇಕೆಂದು ನಿರ್ಧರಿಸಲಾಗಿದೆ.

ಜಾಥ ಬಳಿಕ ಓಲ್ವೋ ಕಂಪನಿ, ನಾರಾಯಣ ಹೆಲ್ತ್‌ಕೇರ್ ವತಿಯಿಂದ ಉಚಿತ ಹೃದಯ ತಪಾಸಣೆ ನಡೆಯಲಿದೆ. ಇಸಿಜಿ, ಎಕೋ, ಹೆಣ್ಣುಮಕ್ಕಳಿಗೆ ಸ್ತನಪರೀಕ್ಷೆ ಮತ್ತು ಗರ್ಭಕೊರಳಿನ ಪರೀಕ್ಷೆ ಕೂಡ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ಹೆಣ್ಣುಮಕ್ಕಳು ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

# ನಮಗೆ ಬೇರೇನೂ ಬೇಡ ಸುಸಜ್ಜಿತ ರಸ್ತೆ ಸಾಕು



ಇದು ಬೇರೆ ದೇಶದಲ್ಲಿ ಬಾಂಬ್ ದಾಳಿಗೆ ಒಳಗಾಗಿ ಹಾನಿ ಆಗಿದೆ ಅಂದ್ಕೊಂಡ್ರಾ ತಪ್ಪು. ಇದು ಸಕಲೇಶಪುರ ತಾಲ್ಲೂಕು ಹಾನುಬಾಳು ಹೋಬಳಿ ಕೇಂದ್ರದಿಂದ ಇಂದಿರಾನಗರ (ಕೂಡಿಗೆ) ಹಾದಿಗೆ, ಮದನಾಪುರ, ಮರಹಾದಿಗೆ ಕಡೆ ಸಾಗುವ ಗ್ರಾಮೀಣ ಪ್ರದೇಶದ ರಸ್ತೆ.

ನಿಮಗೆ ತಾಳ್ಮೆ ಕಲಿಯಬೇಕಂದ್ರೆ ಯೋಗ ಮಾಡಬೇಕು ಬೇಕು ಅಂತಿಲ್ಲ. ಈ ರಸ್ತೆಯಲ್ಲಿ ದ್ವಿಚಕ್ರ ಹಾಗೂ ಕಾರನ್ನು ಚಾಲನೆ ಮಾಡಿಕೊಂಡು ಹೋದರು. ಸಾಕು ತಾಳ್ಮೆ ತನ್ನಿತಾನೆ ಬರುತ್ತದೆ. ರಸ್ತೆ ಕಲಿಸುತ್ತದೆ, ತಾಳ್ಮೆ ಗೆಟ್ಟರೆ ವಾಹನ ಪುಡಿ ಪುಡಿ ಗ್ಯಾರಂಟಿ.

ಇನ್ನು ಪಾದಚಾರಿಗಳು ಗೊತ್ತಿಲ್ಲದೇ ಕರಾಟೆಯ ಎಲ್ಲ ಅಸನವನ್ನು ಕಲಿಯುತ್ತಾರೆ. ಇಂದು ಕಡೆ ರಸ್ತೆ ಗುಂಡಿ ತಪ್ಪಿಸಿ ನಡೆಯಬೇಕು. ಇನ್ನೊಂದು ಕಡೆ ಬರುವ ವಾಹನ ಡಿಕ್ಕಿ ಆಗುವುದು ತಪ್ಪಿಸಿಕೊಳ್ಳಬೇಕು. ಇನ್ನೊಂದು ಕಡೆ ವಾಹನಗಳು ಗುಂಡಿಗೆ ಜಿಗಿದಾಗ (ಇಷ್ಟಪಟ್ಟು ಅಲ್ಲ ಕಷ್ಟಪಟ್ಟು) ಹಾರುವ ಗೊಚ್ಚೆ ನೀರನ್ನ ತಪ್ಪಿಸಿಕೊಳ್ಳಬೇಕು. ಒಂದು ರಸ್ತೆಯಿಂದ ಎಂತೆಂತ ಪಾಠ ಸಾರ್ವಜನಿಕರಿಗೆ. ವರ್ಷದಲ್ಲಿ 5 ತಿಂಗಳು ಮಳೆ ಬರುವ ಸಂಪೂರ್ಣ ಮಲೆನಾಡು, ಅದರಲ್ಲೂ ಜೂನ್, ಜುಲೈ, ಆಗಸ್ಟ್ ತಿಂಗಳು ನಿರಂತರ ಎಡೆ ಬಿಡದೆ ಮಳೆ ಸುರಿಯುವ ಪಶ್ಚಿಮ ಘಟ್ಟದ ಪ್ರದೇಶ. ನಾವು ಮಲೆನಾಡಿಗರು, ಕೃಷಿಗೆ ನೀರು ಬಿಡಲು ಅಣೆಕಟ್ಟು, ಕಾಲುವೆ ಕೇಳುವುದಿಲ್ಲ. ಇಲ್ಲಿ ಕಾರ್ಖಾನೆ ಮಾಡಿ ಉದ್ಯೋಗ ಕೊಡಿ ಅಂತ ಕೇಳುವುದಿಲ್ಲ, ಕೇಳುವುದು ಒಂದೆ ಅದು ಓಡಾಡಲು ಯೋಗ್ಯವಾದ ಸರ್ವ ಋತು ರಸ್ತೆ ...ಯಾರಿಗೆ ಹೇಳುವುದು ಯಾರಿಗೆ ಕೇಳುವುದು... ಹೇಳುವವರು ಸಾಕಷ್ಟು ಜನ ಇದ್ದಾರೆ... ಕೇಳಿಸಿ ಕೊಳ್ಳುವವರು ಇದ್ರೆ ಹುಡುಕಿಕೊಡಿ.

**- ಅವರೇಕಾಡು ಪೃಥ್ವಿ**

# ತೆರೆದ ಕೊಳವೆ ಬಾವಿ ಮುಚ್ಚಲು ಜಿಲ್ಲಾಧಿಕಾರಿ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್



ಹಾಸನ: ತೆರೆದ ಕೊಳವೆ ಬಾವಿಗಳಲ್ಲಿ ಸಂಭವಿಸಬಹುದಾದ ದುರಂತಗಳನ್ನು ತಪ್ಪಿಸಲು ಬಾವಿಗಳನ್ನು ತ್ವರಿತಗತಿಯಲ್ಲಿ ಮುಚ್ಚಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಸೂಚಿಸಿದ್ದಾರೆ.

ಸರ್ಕಾರದ ವಿವಿಧ ಇಲಾಖೆಗಳಿಂದ ಅರೆ ಸರ್ಕಾರಿ, ಇನ್ನಿತರೆ ಸಂಸ್ಥೆಗಳಿಂದ ಅಥವಾ ಖಾಸಗಿಯವರಿಂದ ಕೊರೆಯಲಾದ ಕೊಳವೆ ಬಾವಿಗಳನ್ನು ಮುಚ್ಚಲಾಗಿದೆ. ವಿಜಯಪುರ ಜಿಲ್ಲೆಯಲ್ಲಿ 2 ವರ್ಷದ ಮಗು ಕೊಳವೆ ಬಾವಿಗೆ ಬಿದ್ದ ಪ್ರಕರಣದ ಕುರಿತಂತೆ ಮುಂಜಾಗ್ರತ ಕ್ರಮವಹಿಸಲು ಸರ್ಕಾರದ ವಿವಿಧ ಇಲಾಖೆಗಳು ಅರೆ ಸರ್ಕಾರಿ-ಇನ್ನಿತರ ಸಂಸ್ಥೆಗಳಿಂದ ಮತ್ತು ರೈತರು ಕೃಷಿ ಜಮೀನುಗಳಲ್ಲಿ ಕೊರೆಸಿರುವ ಕೊಳವೆ ಬಾವಿಗಳು ವಿಫಲವಾಗಿದ್ದಲ್ಲಿಅಂತಹ ಬಾವಿಗಳನ್ನು ಗುರುತಿಸಿ ಅವುಗಳಿಗೆ ಸೂಕ್ತವಾದ ಕಬ್ಬಿಣದ ಕ್ಯಾಪ್ ಹಾಕಿ, ಮೇಲೆ 2 ಅಡಿಗಳಷ್ಟು ಮಣ್ಣು ಹಾಕಿ ಅದರ ಮೇಲೆ ಮುಳ್ಳು ಹಾಕಿ ಮುಚ್ಚಬೇಕು.

ಕೊಳವೆ ಬಾವಿಗಳನ್ನು ಸೂಕ್ತ ರೀತಿಯಲ್ಲಿ ಮುಚ್ಚದಿದ್ದಲ್ಲಿ ಸಂಬಂಧಪಟ್ಟ ಜಮೀನು ಮಾಲೀಕರು ಹಾಗು ರಿಗ್ ಮಾಲೀಕರು ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಕೊಳವೆ ಬಾವಿ ಕೊರೆಯುವ ರಿಗ್ ಯಂತ್ರಗಳನ್ನು ಅದರ ಮಾಲೀಕರು ಕರ್ನಾಟಕ ಅಂತರ್ಜಲ ಪ್ರಾಧಿಕಾರದಡಿ ನೊಂದಾಯಿಸಿಕೊಳ್ಳುವುದು ಕಡ್ಡಾಯ.

ವಿಫಲವಾದ ಕೊಳವೆ ಬಾವಿಗಳನ್ನು ಮುಚ್ಚಿಸದೇ ಇರುವಂತಹ ಪ್ರಕರಣಗಳೇನಾದರೂ ಜಿಲ್ಲೆಯಲ್ಲಿ ಸಂಭವಿಸಿದರೆ ಸಂಬಂಧಿಸಿದ ಭೂ ಮಾಲೀಕರು ಹಾಗು ಬೋರ್‌ವೆಲ್ ಕೊರೆದಿರುವ ಏಜೆನ್ಸಿ ವಿರುದ್ಧ ವಿಪತ್ತು ನಿರ್ವಹಣೆ ಕಾಯ್ದೆ-2005ರ ಅನ್ವಯ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಅವರು ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಗ್ರಾಮವಾರು ಪರಿಶೀಲಿಸಿ ಮತ್ತೊಮ್ಮೆ ತೆರೆದ, ವಿಫಲ ಕೊಳವೆ ಬಾವಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ. ಸ್ಥಳೀಯ ಸಂಘ ಸಂಸ್ಥೆಗಳು ಎನ್‌ಜಿಒ, ಇತರೆ ಖಾಸಗಿ ವ್ಯಕ್ತಿಗಳು ಸಹ ವಿಫಲ ಕೊಳವೆ ಬಾವಿಯನ್ನು ಮುಚ್ಚಲು ಸಹಕರಿಸುವುದು. ಯಾವುದೇ ಅನಾಹುತ ಸಂಭವಿಸುವ ಮುನ್ನ ತಮ್ಮ ಗ್ರಾಮಗಳ ವ್ಯಾಪ್ತಿಯಲ್ಲಿ ತೆರೆದ, ನಿರುಪಯುಕ್ತ ಕೊಳವೆ ಬಾವಿಗಳು ಕಂಡುಬಂದಲ್ಲಿ ಸಾರ್ವಜನಿಕರು ಜಿಲ್ಲಾಧಿಕಾರಿ ಕಚೇರಿಯ ಸಹಾಯವಾಣಿ ಸಂಖ್ಯೆ 08172-261111ಗೆ ಕರೆ ಮಾಡಿ ತಿಳಿಸಲು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಅಂತರ್ಜಲ ಪ್ರಾಧಿಕಾರ ಸಮಿತಿಯ ಅಧ್ಯಕ್ಷರು ತಿಳಿಸಿದ್ದಾರೆ.

# ಉದ್ಯೋಗ ಉತ್ತೇಜನಕ್ಕೆ ಕೇಂದ್ರದಿಂದ ಇಎಲ್‌ಐ ಜಾರಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್




ಹಾಸನ: ಉದ್ಯೋಗ ಸೃಷ್ಟಿ ಹಾಗೂ ಸಾಮಾಜಿಕ ಭದ್ರತಾ ಉದ್ದೇಶದಿಂದ ಕೇಂದ್ರ ಸರ್ಕಾರ ಉದ್ಯೋಗ ಸಂಬಂಧಿತ ಪ್ರೋತ್ಸಾಹ ಧನ (ಇಎಲ್‌ಐ) ಯೋಜನೆ ಜಾರಿಗೊಳಿಸಿದ್ದು ಜಿಲ್ಲೆಯ ಜನರು ಸದುಪಯೋಗ ಪಡೆಯಬೇಕು ಎಂದು ಚಿಕ್ಕಮಗಳೂರು ಕ್ಷೇತ್ರೀಯ ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಸಿಬ್ಬಂದಿ ಭರತ್ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಯೋಜನೆಯಡಿ ಹೊಸದಾಗಿ ಕೆಲಸಕ್ಕೆ ಸೇರುವವರಿಗೆ ಇದರಿಂದ ಸಾಕಷ್ಟು ಪ್ರಯೋಜನಗಳಿವೆ. ಒಂದು ತಿಂಗಳ ವೇತನವನ್ನು (15 ಸಾವಿರ ರೂ. ವರೆಗೆ) ಪ್ರೋತ್ಸಾಹಧನದ ರೂಪದಲ್ಲಿ ನೀಡಲಾಗುವುದು. ಜೊತೆಗೆ ಹೆಚ್ಚುವರಿ ಉದ್ಯೋಗ ಸೃಷ್ಟಿಸಲು ಉದ್ಯೋಗದಾತರಿಗೆ ಒಂದು ಅವಧಿಯಿಂದ ಎರಡು ವರ್ಷಗಳವರೆಗೆ ಪ್ರೋತ್ಸಾಹಧನ ನೀಡಲಾಗುವುದು ಎಂದರು.

2025ರ ಆ. 1 ರಿಂದ 2027 ಜು. 31ರ ನಡುವೆ ಸೃಷ್ಟಿಯಾದ ಉದ್ಯೋಗಗಳಿಗೆ ಯೋಜನೆ ಅನ್ವಯವಾಗುತ್ತದೆ. 1 ಲಕ್ಷ ರೂ. ವರೆಗೆ ಸಂಬಳ ಪಡೆಯುವ ಉದ್ಯೋಗಿಗಳು ಅರ್ಹರಾಗಿರುತ್ತಾರೆ. 6 ತಿಂಗಳ ಸೇವೆ ನಂತರ ಮೊದಲ ಕಂತು ಪಾವತಿಸಲಾಗುವುದು. 12 ತಿಂಗಳ ಸೇವೆ ನಂತರ ಮತ್ತು ಉದ್ಯೋಗ ಆರ್ಥಿಕ ಸಾಕ್ಷರತಾ ಕಾರ್ಯಕ್ರಮ ಪೂರ್ಣಗೊಳಿಸಿದ ನಂತರ 2ನೇ ಕಂತನ್ನು ಪಾವತಿಸಲಾಗುವುದು. ಉಳಿತಾಯದ ಅಭ್ಯಾಸ ಉತ್ತೇಜಿಸಲು ಪ್ರೋತ್ಸಾಹದ ಒಂದು ಭಾಗವನ್ನು ಠೇವಣಿ ಖಾತೆಯ ಉಳಿತಾಯ ಸಾಧನದಲ್ಲಿ ನಿಗದಿತ ಅವಧಿಗೆ ಇಡಲಾಗುತ್ತದೆ ಎಂದು ಹೇಳಿದರು.

ಇಪಿಎಫ್‌ಒನಲ್ಲಿ ನೋಂದಾಯಿಸಲಾದ ಸಂಸ್ಥೆಗಳು, ಕನಿಷ್ಟ ಆರು ತಿಂಗಳವರೆಗೆ ನಿರಂತರ ಆಧಾರದ ಮೇಲೆ ಕನಿಷ್ಟ ಇಬ್ಬರು, ಹೆಚ್ಚುವರಿ ಉದ್ಯೋಗಿಗಳನ್ನು ಅಥವಾ 5 ಹೆಚ್ಚುವರಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲಾಗುತ್ತದೆ ಎಂದರು. ಉದ್ಯೋಗಿಗಳು ಮತ್ತು ಉದ್ಯೋಗದಾತರು ಈ ಯೋಜನೆಯ ಸದುಪಯೋಗ ಪಡೆಯಬೇಕಾಗಿ ವಿನಂತಿಸಿದರು. ಇಪಿಎಫ್ ಅಧಿಕಾರಿ ಮಧುರಾನಾಥ ಇದ್ದರು.

# ವೃತ್ತಿಪರ ತರಬೇತಿಗೆ ಅರ್ಜಿ ಆಹ್ವಾನ

ಹಾಸನ : ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ 2025-26ನೇ ಸಾಲಿಗೆ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶವನ್ನು ಒದಗಿಸುವ ನಿಟ್ಟಿನಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ವೃತ್ತಿಪರ ತರಬೇತಿಯನ್ನು ಇನ್‌ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್, ಬೆಂಗಳೂರು ಇಲ್ಲಿ ನೀಡಲಾಗುತ್ತಿದ್ದು, ಸದರಿ ತರಬೇತಿಗೆ ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಮತ್ತು ಪಾರ್ಸಿ ಸಮುದಾಯದ ವಿದ್ಯಾರ್ಥಿಗಳಿಂದ ಸೇವಾ ಸಿಂಧು ಪೋರ್ಟಲ್ ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆ.02 ಕೊನೆಯ ದಿನಾಂಕವಾಗಿದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸೇವಾ ಸಿಂಧು ಪೋರ್ಟಲ್‌ನಲ್ಲಿ ನೇರವಾಗಿ ಲಿಂಕ್‌ನಲ್ಲಿ||t:// bqgwe.mbwqb|bmb..q /bqg/Btbw|q|we ಸಲ್ಲಿಸಬಹುದು.

ವಿದ್ಯಾರ್ಥಿಗಳಿಗೆ ಮಾರ್ಗಸೂಚಿಗಳು: ವಿದ್ಯಾರ್ಥಿಯು ಕರ್ನಾಟಕದ ಖಾಯಂ ನಿವಾಸಿಯಾಗಿದ್ದು, ರಾಜ್ಯ ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಮತ್ತು ಪಾರ್ಸಿ ಸೇರಿದವರಾಗಿರಬೇಕು. ವಿದ್ಯಾರ್ಥಿಯು ಕನಿಷ್ಠ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ 8 ಲಕ್ಷಕ್ಕಿಂತ ಮೀರಿರಬಾರದು. ತರಬೇತಿಗಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ವಯೋಮಿತಿಯನ್ನು ಕನಿಷ್ಠ 18 ಮತ್ತು ಗರಿಷ್ಠ 35 ವರ್ಷಗಳಿಗೆ ನಿಗಧಿಪಡಿಸಲಾಗಿದೆ. ವಿದ್ಯಾರ್ಥಿಯು 10ನೇ ತರಗತಿಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

# ಇತಿಹಾಸದಲ್ಲಿ ಈ ದಿನ

## ಜುಲೈ-23

1906: ಬಾಲ ಗಂಗಾಧರನಾಥ್ ತಿಲಕ್ ಅವರು ಜನತೆಗೆ ಸ್ವರಾಜ್ಯ ನನ್ನ ಹಕ್ಕು, ನಾನು ಅದನ್ನು ಪಡೆದುಕೊಳ್ಳುತ್ತೇನೆ ಎಂದು ಘೋಷಿಸಿದರು.

1927: ರೆವಲ್ಯೂಷನರಿ ಸಂಸ್ಥಾಪನೆ: ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ ಸ್ಥಾಪನೆಯಾಯಿತು. ಭಗತ್ ಸಿಂಗ್ ಮತ್ತು ಅವರ ಸಾಥಿಯರಿಂದ.

1999: ಕಾರ್ಗಿಲ್ ಯುದ್ಧ ಅಂತ್ಯ: ಭಾರತಪಾಕಿಸ್ತಾನ ನಡುವಿನ ಕಾರ್ಗಿಲ್ ಯುದ್ಧವು ಅಧಿಕೃತವಾಗಿ ಅಂತ್ಯವಾಯಿತು. ಈ ದಿನವನ್ನು 'ಕಾರ್ಗಿಲ್ ವಿಜಯ ದಿವಸ್' ಎಂದು ಕೂಡ ಆಚರಿಸಲಾಗುತ್ತದೆ.

### ಜನನ

1856: ಬಾಲ ಗಂಗಾಧರನಾಥ್ ತಿಲಕ್: ಭಾರತದ ಸ್ವಾತಂತ್ರ್ಯ ಹೋರಾಟಗಾರ, ಸಾಮಾಜಿಕ ಸುಧಾರಕ, ಮತ್ತು ಲೋಕಮಾನ್ಯ ಎಂಬ ಬಿರುದು ಪಡೆದ ವ್ಯಕ್ತಿ.

1906: ಚಂದ್ರಶೇಖರ್ ಆಜಾದ್: ಧೀರ ಕ್ರಾಂತಿಕಾರಿ, ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದರು.

### ಮರಣ

2020: ಆನಂದ ಸಿಂಗ್ ಧಮ್ಮಿ: ನೇಪಾಳದ ರಾಜಕೀಯ ಮುಖಂಡರು.

# ಕಾಯಿಲೆಯ ಕಥೆ- ಕಥೆಗಾರ್ತಿ ಪ್ರಕೃತಿ

**- ಚೇತನ್ ಗುರೂಜಿ,**
**ಬಸವ ಯೋಗ ಕೇಂದ್ರ, ಅಡಗೂರು**

ಆರೋಗ್ಯಕ್ಕೆ ಬಂದಿಹ ಕುಂದು
ಕರೆವರದನು ಕಾಯಿಲೆ ಎಂದು

ಇಷ್ಟು ಹೇಳಿದರೆ ರೋಗದ ಬಗ್ಗೆ ಎಲ್ಲಾ ಹೇಳಿದಂತಾಯಿತೆ? ಇಷ್ಟೊಂದು ಕಾಯಿಲೆಗಳಿರುವಾಗ (ಹಾಗೆಂದು ತಿಳಿದಿರುವಾಗ) ಇಷ್ಟು ಸರಳವಾಗಿ ಹೇಳಿಬಿಟ್ಟರೆ ಹೇಗೆ? ಅದಕ್ಕಾಗಿ ಅದನ್ನು ಇನ್ನು ಹೆಚ್ಚು ವಿಶ್ಲೇಷಿಸುವ.


ರೋಗ- ಆರೋಗ್ಯಕ್ಕಾಗಿ ಹೋರಾಟ, ಸ್ನೇಹಿತರಿದ ನಶ್ಯ ಹಾಕಿದರೆ ಮಜಾ ಸಿಕ್ಕುವುದೆಂದು. ನೋಡೋಣವೆಂದು ಮೊದಲ ಸಲ ಮೂಗಿಗೇರಿಸಿದರೆ ಪ್ರಾರಂಭವಾಯಿತು. ಟಿಆಕ್ಷೀಟಿ ಬಹಳ ಹೊತ್ತಿನವರೆಗೂ ನಿನ್ನಲ್ಲೇ ಇಲ್ಲ. ಮನೆಯಲ್ಲಿ ಮೆಣಸಿನ ಕಾಯಿಯನ್ನು ಹುರಿಯಲು ಪ್ರಾರಂಭಿಸುತ್ತಾರೆಂದುಕೊಳ್ಳಿ. ತಕ್ಷಣ ಪ್ರಾರಂಭ ಕೆಮ್ಮು, ಕಣ್ಣಿನಲ್ಲಿ, ಮೂಗಿನಲ್ಲಿ ನೀರು. ಏಕೆ ಹೀಗೆ? ಮೂಗಿನ ತೆಳು ಪೊರೆಗೆ ನಶ್ಯ. ಮೆಣಸಿನಕಾಯಿ ಇವೆಲ್ಲ ಅಪ್ರಾಕೃತಿಕ ವಸ್ತುಗಳು ಶರೀರ ತಕ್ಷಣ ಅವುಗಳನ್ನು ಹೊರಕ್ಕೆ ದೂಡಲು ಪ್ರಾರಂಭಿಸುತ್ತದೆ. ಆ ಪ್ರಯತ್ನವೇ ಸೀನು, ಕೆಮ್ಮು ಇತ್ಯಾದಿ ಮತ್ತೊಂದು ಉದಾಹರಣೆ. ಒಂದು ಲೋಟ ಹಳ್ಳಿಯನ್ನು ಕುಡಿಯಿರಿ ಕುಡಿಯುತ್ತಿರುವಾಗಲೇ ವಾಕರಿಕೆ ಬಂದು ಹೊರಕ್ಕೆ ನೂಕಲು ಪ್ರಯತ್ನ ಮಾಡುತ್ತದೆ. ಎಣ್ಣೆಗೆ ಜಾರುವ ಗುಣವಿರುವುದರಿಂದ ತಕ್ಷಣ ಜಠರ ಅಲ್ಲಿಂದ ಕರುಳು ಸೇರಿಬಿಡುತ್ತದೆ. ಹೇಗಾದರೂ ಅದನ್ನು ಹೊರಕ್ಕೆ ಹಾಕಲು ಶರೀರ ಪ್ರಯತ್ನಿಸುತ್ತದೆ ಅದೇ ಭೇದಿ.

ರಕ್ತದಿಂದ ನೀರನ್ನು ಹೀರಿಕೊಂಡು ಆ ನೀರಿನ ಮುಖಾಂತರ ಹರಳೆಣ್ಣೆಯನ್ನು ಹೊರಕ್ಕೆ ನೂಕುತ್ತದೆ. ಈ ತಿಕ್ಕಾಟದಲ್ಲಿ ಕರುಳಿನಲ್ಲಿದ್ದ ಎಲ್ಲಾ ವಸ್ತುಗಳು ಹೊರದೂಡಲ್ಪಡುತ್ತವೆ. ಹಾಗೆ ಯಾವುದಾದರೂ ವೈರಸ್ ಶರೀರ ಸೇರಿದರೆ ತಕ್ಷಣ ಅದನ್ನು ಹೊರಕ್ಕೆ ದಬ್ಬಲು ಶರೀರ ಪ್ರಯತ್ನಿಸುತ್ತದೆ. ಈ ಹೋರಾಟದಲ್ಲಿ ಜ್ವರ ಬರಬಹುದು ವಾಂತಿ ಭೇದಿಗಳಾಗಬಹುದು. ಈ ಗುಣಗಳನ್ನು ಇಂಗ್ಲಿಷ್ ನಲ್ಲಿ ಹಿಟ್ ಬ್ಯಾಕ್ ಎನ್ನುತ್ತಾರೆ. ಕನ್ನಡದಲ್ಲಿ ತಿರುಗೇಟು. ಈ ತಿಕ್ಕಾಟದಲ್ಲಿ ಉಂಟಾಗುವ ಪ್ರಕ್ರಿಯೆಗೆ ನಾವು ರೋಗವೆಂದು ಕರೆಯುತ್ತೇವೆ.

ಜೀವ ಸದಾ ತನ್ನ ಆರೋಗ್ಯದ ಮಟ್ಟವನ್ನು ಕಾಪಾಡಿಕೊಳ್ಳಲು ಹೆಣಕಾಡುತ್ತಲೇ ಇರುತ್ತದೆ. ಕಾರಣ ಅದು ಅದರ ಸಹಜ ಸ್ಥಿತಿ ಏನಾದರೂ ಅದಕ್ಕೆ ಧಕ್ಕೆ ಬಂದರೆ ಪುನ: ಆರೋಗ್ಯದ ಸ್ಥಿತಿಗೆ ಮರಳಲು ಪ್ರಯತ್ನಿಸುತ್ತದೆ. ಇದು ಜೀವದ ಲಕ್ಷಣ ಅದರ ಸಹಜ ಗುಣ. ಶರೀರ ಆಹಾರ ಒಂದನ್ನು ಬಿಟ್ಟು ಉಳಿದ ಯಾವುದೇ ವಸ್ತುವನ್ನು ಒಳಕ್ಕೆ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ನಮಗೆ ಅರಿವಿಲ್ಲದೆ ಅಥವಾ ಬಲವಂತವಾಗಿ ಬೇರೆ ಯಾವುದೇ ವಸ್ತು ಒಳಗೆ ಸೇರಲು ಪ್ರಯತ್ನಿಸಿದರೆ ಕೂಡಲೇ ಅದನ್ನು ಹೊರದೂಡುವ ಕೆಲಸಕ್ಕೆ ಯಾರಿಗೂ ತಿಳಿಸದೆ ಸ್ವತಃ ತಾನೇ ಕೈಯಾಗುತ್ತದೆ. ಆಗ ಉಂಟಾದ ಪ್ರಕ್ರಿಯೆಯನ್ನು ರೋಗವೆಂದು ನಾವು ಗುರುತಿಸುತ್ತೇವೆಷ್ಟೇ.

## ರೋಗ ಶರೀರದ ಭಾಷೆ

ಊರು ಅನೇಕ ಭಾಷೆ ಅನೇಕ ಇದು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ದೇಶದಿಂದ ದೇಶಕ್ಕೆ ಬದಲಾವಣೆಯಾಗುತ್ತದೆ. ಭಾಷೆ ಒಂದು ಸಂವಹನ ಮಾಧ್ಯಮ. ಇದು ಬದಲಾಗುವುದು ಸಹಜ. ಆದರೆ ಮಾನವ ಶರೀರ ಎಲ್ಲಿಂದ ಎಲ್ಲಿಗೆ ಹೋದರೂ ಒಂದೇ. ಕರಿಯ ನೀರಬಹುದು ಬಿಳಿಯ ನೀರಿರಬಹುದು. ಚರ್ಮದ ಬಣ್ಣ ಕೆಂಪಿರಬಹುದು, ಹಳದಿ ಇರಬಹುದು. ಗಂಡಿರಬಹುದು ಹೆಣ್ಣಿರಬಹುದು. ಪ್ರಪಂಚದ ಯಾವುದೇ ಮೂಲೆಯಾಗಿರಬಹುದು. ಶರೀರಕ್ಕೆ ತನ್ನದೇ ಆದ ಒಂದು ಭಾಷೆ ಬೇಕಲ್ಲವೇ. ಅದು ಒಂದೇ ಆಗಿರಬೇಕಲ್ಲವೇ. ಕಾಲಿಗೆ ಮುಳ್ಳು ಚುಚ್ಚಿತ್ತು ಅದು ಇಂಗ್ಲೆಂಡಿನಲ್ಲಾಗಿರಬಹುದು ಇಂಡಿಯಾದಲ್ಲಾಗಿರಬಹುದು.



ಶರೀರದ ಭಾಷೆ ಚುಚ್ಚಿದ ಜಾಗದಲ್ಲಿ ನೋವು. ಏನೋ ತಪ್ಪಿದ್ದರೆ ಶಿರವು ತನ್ನದೇ ಆದ ಮಾತಿನಲ್ಲಿ ಖಂಡಿತ ಹೇಳುತ್ತದೆ. ದೇಹ ಯಾವುದೇ ಅಂಗ ವ್ಯವಸ್ಥೆ ಇಲ್ಲದೆ ಕೆಲಸ ಮಾಡಲು ಸೂಚಿಸುತ್ತಿದ್ದರೆ ಏನೋ ಆಗಿದೆ. ಅದಕ್ಕೆ ಗಮನ ಕೊಡಬೇಕು ಎಂದು ಸಾಮಾನ್ಯ ಬುದ್ಧಿವೂ ತಿಳಿಯುತ್ತದೆ. ಇಂತಹ ಆಟ ಆಡಲು ಪ್ರಕೃತಿಗೆ ಅದರದ್ದೇ ಆದ ಮಾರ್ಗವಿದೆ ಎಂದು ಡಾ. ಬಿ.ಎಂ. ಹೆಗಡೆಯವರು ಹೇಳಿದ್ದಾರೆ.

ಶರೀರದ ಭಾಷೆಯನ್ನು ನಮ್ಮ ಮಾತಿನ ಭಾಷೆಗೆ ಪರಿವರ್ತಿಸುವಾಗ ರೋಗವೆಂದು ಕರೆಯುತ್ತೇವೆ. ಮಗು ಹೊಟ್ಟೆಯ ಹಸಿವಿಗಾಗಿಯೂ ಅಳುತ್ತದೆ. ಹಾಗೆ ಹೊಟ್ಟೆಯ ನೋವಿನಿಂದಲೂ ಅಳುತ್ತದೆ. ಸದಾ ಮಗುವಿನ ಕಡೆಗೆ ಗಮನವಿರುವ ತಾಯಿಗೆ ಅದರ ಭಾಷೆ ಅರ್ಥವಾಗುತ್ತದೆ. ಹಾಗೆ ನಾವು ಸಹ ನಮ್ಮ ಶರೀರದ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿ ಅದರಲ್ಲಿ ಉತ್ತೀರ್ಣರಾದರೆ ರೋಗವು ಅರ್ಥವಾಗುತ್ತದೆ.

## ಅರ್ಥವಾಗದಿದ್ದರೆ ಆಗುವುದು ಕ್ಲಿಷೆ

ಅರ್ಥವಾಗಲು ಎಲ್ಲರೂ ತಾವೇ ಓದಬೇಕು ತಮ್ಮ ಶರೀರವೆಂಬ ಪುಸ್ತಕ ಬಾರಿ ಬಾರಿ ಪುಸ್ತಕಗಳಲಿ ಅದನ್ನು ಹುಡುಕುವುದು ನಿರರ್ಥಕ ಶಬ್ದಾರ್ಥಗಳಿಗೆ ಇಹುದಲ್ಲ. ಪ್ರಕೃತಿಯೆಂಬ ಶಬ್ದಕೋಶ ಅದನ್ನು ಉಪಯೋಗಿಸಿದರೆ ರೋಗ ಆಗುವುದು ನಾಶ.

## ರೋಗ ಪ್ರಕೃತಿ ತಿದ್ದುವ ಮಾರ್ಗ

ಭೀಮರಾಯರು ಭೀಮನಷ್ಟಿಲ್ಲದಿದ್ದರೂ ಸ್ಥೂಲಕಾಯರೇ. ಶಕ್ತಿಯಲ್ಲಿಲ್ಲವಾದರೂ ಜೀರ್ಣಶಕ್ತಿಯಲ್ಲಿ ಅವನನ್ನು ಸೋಲಿಸಬೇಕೆಂದು ಅವರ ಬಯಕೆ. ವಾರಕ್ಕೊಮ್ಮೆ ಅಜೀರ್ಣದ ಕಾಯಿಲೆ ಶುಂಠಿ ಮೆಣಸುಗಳಿಂದ ಜೀರ್ಣಕ್ರಿಯೆ ಹೆಚ್ಚಿಸುವ ಕಾರ್ಯಗಳು ನಡೆದವು. ಮನೆಯ ಮದ್ದುಗಳು ಮುಗಿದ ನಂತರ ಎಲ್ಲಾ ವೈದ್ಯ ಪದ್ಧತಿಗಳಿಗೂ ಒಂದಾದ ನಂತರ ಒಂದಕ್ಕೆ ಕೆಲವು ವೇಳೆ ಒಂದೇ ವೇಳೆ ಎರಡು ಪದ್ಧತಿಗಳಿಗೆ ಪಯಣ. ಅನೇಕ ವರ್ಷಗಳು ಔಷಧಗಳನ್ನು ತೆಗೆದುಕೊಂಡರು ಕರುಳಿನ ಕೊಂಚ ಭಾಗವನ್ನು ಕಳೆದುಕೊಳ್ಳುವುದು ಕಡೆಗೂ ಅನಿವಾರ್ಯವಾಯಿತು. ಮೊದಲಿನಿಂದಲೂ ಅಜೀರ್ಣದ ರೂಪದಲ್ಲಿ ನೋವಿನ ಮುಖಾಂತರ ಅವರಿಗೆ ಎಚ್ಚರಿಕೆ ಕೊಡುತ್ತದೆ. ನೀನು ತಿನ್ನುವುದು ಹೆಚ್ಚು ಅದನ್ನು ತಿದ್ದಿಕೋ ಇದು ನಿಸರ್ಗದ ಎಚ್ಚರಿಕೆ. ಔಷಧ ನುಂಗಿಯಾದರು ತಿನ್ನುತ್ತೇನೆ ಇದು ಇವರ ಆಟ ಕಡೆಗೂ ಗೆಲ್ಲುವುದು ನಿಸರ್ಗದ ಮಾತೇ.

ಅನೇಕ ರೀತಿಯಲ್ಲಿ ಪ್ರಕೃತಿ ನಮಗೆ ತಿದ್ದಿಕೊಳ್ಳುವ ಅವಕಾಶವನ್ನು ನೀಡುತ್ತಿರುತ್ತದೆ. ಅದನ್ನು ಗಮನಿಸುವ ಅಂತ:ಶಕ್ತಿ ನಮ್ಮಲ್ಲಿ ಬಂದರೆ ರೋಗಗಳ ಬಗ್ಗೆ ಜಾಗರೂಕರಾಗಬಹುದು. ನಂತರದಲ್ಲಿ ದೀರ್ಘ ಕಾಯಿಲೆಗಳಿಗೆ ತುತ್ತಾಗುವ ಮುಂಚೆ ಸಣ್ಣದರಲ್ಲಿ ಪರಿಹಾರವನ್ನು ಕಂಡುಕೊಂಡು ರೋಗವನ್ನು ಗುಣಪಡಿಸಿಕೊಂಡು ಆರೋಗ್ಯದಿಂದಿರಲು ಮೇಲೆ ತಿಳಿಸಿದ ರೀತಿ ಅನೇಕ ರೂಪದಲ್ಲಿ ಪ್ರಕೃತಿ ನಮಗೆ ತಿಳಿಸುತ್ತಿರುತ್ತದೆ. ಅರ್ಥ ಮಾಡಿಕೊಂಡು ಮುನ್ನಡೆಯುವ ಜಾಣತನವನ್ನು ನಾವುಗಳು ತೋರಿಸಿದರೆ ಸಾಕು. ಇಲ್ಲದೆ ನಾನು ಓದಿದ್ದೇನೆ ಬುದ್ಧಿವಂತನಿದ್ದೇನೆ ಅನುಭವಿಯಾಗಿದ್ದೇನೆ ಎಂದು ವಿತಂಡವಾದ ಮಾಡುತ್ತಾ ಕುಳಿತುಕೊಂಡರೆ ನಮ್ಮ ನಾಶವನ್ನು ನಾವೇ ಮಾಡಿಕೊಳ್ಳುತ್ತೇವೆ. ಅರ್ಥ ಬಹಳಷ್ಟು ಜನರಿಗೆ ಸ್ವತ: ನಾನೇ ಅನೇಕ ಊರುಗಳಿಗೆ ಯೋಗ ಶಿಬಿರಕ್ಕೆ ಹೋದಾಗ ಬನ್ನಿ ಆರೋಗ್ಯಕ್ಕಾಗಿ ಅಭ್ಯಾಸವನ್ನು ಆರಂಭಿಸೋಣ ಎಂದು ಕರೆದರೂ ಅವರು ನನಗೆ ಯಾವುದೇ ಅನಾರೋಗ್ಯದ ಸಮಸ್ಯೆಗಳಿಲ್ಲ ಚೆನ್ನಾಗಿದ್ದೇನೆ ಎಂದು ಗೊತ್ತಿಲ್ಲದೆ ತಮಗೆ ತಾವೇ



ಆರೋಗ್ಯವಾಗಿದ್ದೇನೆ ಅಂದುಕೊಂಡು ರೋಗಿ ಆಗುವುದರ ಕಡೆಗೆ ಹೆಜ್ಜೆ ಇಡುತ್ತಾರೆ. ಕೆಲವೇ ವರ್ಷಗಳಲ್ಲಿ ಹಾಸಿಗೆ ಹಿಡಿದು ಮಲಗಿರುವವರನ್ನು ನೋಡಿದ್ದೇನೆ. ಅಲ್ಲದೆ ಈ ಭೂಮಿಯನ್ನು ಖಾಲಿ ಮಾಡಿರುವುದು ಉಂಟು. ಅರ್ಥವಿಷ್ಟೇ ಬದಲಾವಣೆ ಮಾಡಿಕೊಳ್ಳಲು ಯಾವುದೇ ನಮ್ಮ ಅಹಂಕಾರ ಅಡ್ಡಿ ಮಾಡಬಾರದು ಅದರಲ್ಲೂ ಆರೋಗ್ಯ ವಿಚಾರದಲ್ಲಿ ದಡ್ಡತನ ಒಳ್ಳೆಯದಲ್ಲ.

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ
ಮಾಡುವ ನೀಡುವ ನಿಜಗುಣವುಳ್ಳೊಡೆ
ಕೂಡಿ ಕೊಂಬ ನಮ್ಮ ಕೂಡಲಸಂಗಮದೇವ.

ಇದು ಬಸವಣ್ಣನವರ ವಚನ. ಅರ್ಥವಿಷ್ಟೇ ಬಹಳಷ್ಟು ವರ್ಷಗಳ ಕೆಲಸ ಮಾಡಿದ ಅನುಭವ ಇದೆ. ನೀಡುವುದರಲ್ಲಿ ನಾನು ಎತ್ತಿದ ಕೈ ಎಂದು ಬೀಗುವುದನ್ನು ಬಿಟ್ಟು ಮಾಡಿರುವುದು ನೀಡಿರುವುದು ಸ್ವಲ್ಪ ನಾನೇನು ಮಾಡಿಲ್ಲ ಎಂಬ ಮನೋಭಾವನೆ ತಾಳಿದಾಗ ಪರಮಾತ್ಮನ ದರ್ಶನವಾಗುತ್ತದೆ. ಯಾವುದೇ ಕ್ಷೇತ್ರದಲ್ಲೂ ಎಷ್ಟೇ ಪರಿಣಿತಿ ಪಡೆದಿದ್ದರು ಬೇರೆಯವರಿಂದಲೂ ಕಲಿಯುವುದಿದೆ ಎಂಬ ಮನಸ್ಥಿತಿ ಬಂದಾಗ ಬದಲಾಗಬಹುದು. ಅಲ್ಲದೆ ಸತ್ಯದ ದರ್ಶನ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಏನಂತೀರಿ?

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248